


ಹೇಳಲಾಗದ ಆನಂದವೊಂದು ಗವಾಯಿಗಳ ಸಾಂಗತ್ಯದಲ್ಲಿ ತನ್ನೊಳಗೆ ಮೂಡುತ್ತಿದ್ದುದು ಸ್ವತಃ ಏಕನಾಥನಿಗೆ ಒಂದು ಒಗಟಾಗಿತ್ತು. ಗವಾಯಿಗಳು ಹಾಡುವಾಗ ತಂಬೂರ ನುಡಿಸಲು ಕಲಿತ ಏಕನಾಥ, ಸ್ವಲ್ಪ ದಿನದಲ್ಲಿ ತಂಬೂರಿಯ ಸ್ವರಕ್ಕೆ ತನ್ನ ಸ್ವರವನ್ನು ಸೇರಿಸಲಾರಂಭಿಸಿದಾಗ ಅಷ್ಟು ಕಾಲ ನಿರ್ಭಾವುಕರಂತೆ ಕಣ್ಣು ಮುಚ್ಚಿ ಹಾಡುತ್ತಿದ್ದ ಗವಾಯಿಗಳ ಕಣ್ಣಲ್ಲಿ ಬೆಳಕು ಮೂಡಿತ್ತು. ಏಕನಾಥನ ಆವಾಜಿನಲ್ಲಿದ್ದ ಗಾಂಭೀರ್ಯ ಬೆರೆತ ಮಧುರತೆ ಗವಾಯಿಗಳಲ್ಲಿ ಉತ್ಸಾಹ, ನಿರೀಕ್ಷೆ, ವ್ಯಾಮೋಹಗಳನ್ನು ತುಂಬಿತ್ತು.

ಮುಂದಿನ 10 ವರ್ಷಗಳ ಕಾಲ ನಡೆದದ್ದೆಲ್ಲವೂ ರಮ್ಯವಾದ ಕನಸೆಂಬಂತೆ ಈಗ ಕಾಣುತ್ತಿದೆ. ತಾವು ಅನ್ನ ಮಾಡಲು ಇಟ್ಟುಕೊಂಡಿದ್ದ ದೊಡ್ಡ ಅಲ್ಯುಮಿನಿಯಂ ಡಬರಿಯನ್ನೇ ಬೋರಲು ಹಾಕಿ, ಅದರ ಮೇಲೆ ತಬಲಾ ಬೋಲ್‌ಗಳನ್ನು ನುಡಿಸುತ್ತಾ ಗವಾಯಿಗಳು ತನಗೆ ತಾಳ–ಲಯ ಪಕ್ಕಾ ಮಾಡಿಸಿದರು. ಬೆಳಿಗ್ಗೆ ಭೈರವ್, ತೋಡಿ ಮತ್ತೆ ಸಂಜೆ ಯಮನ್, ಪೂರಿಯಾ ರಾಗಗಳ ಅಭ್ಯಾಸ ನಾಲ್ಕೈದು ವರ್ಷಗಳವರೆಗೆ ಸಾಗಿತ್ತು. ತಾವು ಹಾಡಿದ ಸ್ವರವಾಕ್ಯ ಸರಿಯಾದ ರೀತಿಯಲ್ಲಿ ಬರುವ ತನಕ ಮತ್ತೆ ಮತ್ತೆ ಹಾಡಿಸಿ, ತಿದ್ದಿ ಸರಿಯಾಗಿ ಬಂದಾಗ 'ಭೇಷ್' ಎನ್ನುತ್ತಿದ್ದ ಗವಾಯಿಗಳ ಕಣ್ಣು ಮಿಂಚುತ್ತಿತ್ತು. ತನ್ನ ತಾಲೀಮಿನ ಕೊನೆಯ ಎರಡು ವರ್ಷಗಳಲ್ಲಂತೂ 'ತನ್ನನ್ನು ತಾನು ಕೊಟ್ಟುಕೊಂಡು ಬರಿದಾಗಬೇಕು' ಎಂಬ ಅವಸರದಲ್ಲಿ ಇದ್ದವರಂತೆ ಕಂಡರು. ತಮ್ಮ ಘರಾಣೆಯ ರಾಗಗಳನ್ನು ಒಂದರ ಹಿಂದೊಂದು ಹೇಳಿಕೊಡುವುದರೊಂದಿಗೆ, ರಾಗದ ವ್ಯಾಕರಣವನ್ನು ಮೀರಿದ ಭಾವಜಗತ್ತಿನ ದರ್ಶನ ಮಾಡಿಸಿದರು. ಕ್ಲಿಷ್ಟಕರವಾದ ಲಯಕಾರಿಯನ್ನು, ತಾನ್ ಗಾಯನದ ತಂತ್ರಗಳನ್ನು ಹೇಳಿಕೊಟ್ಟು ಹಲವು ಕಾಲ ಜತನದಿಂದ ಕಾಪಾಡಿಕೊಂಡು ಬಂದ ತಮ್ಮ ಪರಂಪರೆಯ ಸಾರವನ್ನು ಅವನಿಗೆ ಧಾರೆಯೆರೆದಿದ್ದರು. ಅವನ್ನೆಲ್ಲಾ ನೆನೆಯುವಾಗ ತಾನು ಭಾಗ್ಯವಂತನೇ ಸರಿ ಎಂದು ಹಲವು ಬಾರಿ ಏಕನಾಥನಿಗೆ ಅನಿಸಿದ್ದಿದೆ.